STATUS QUO ON BORDER DISPUTE WITH MAHARASHTRA

409. SRI B. G. Banakar (Hirckerur).—Will the Chief Minister be pleased to state :—

(*a*) whether the Government has taken the stand to maintain the *status quo* in respect of Border Dispute if the Maharashtra Government does not accept the Mahajan Report;

(*b*) whether the Government is further aware that the recommendations in the Mahajan Report are more disadvantageous and more harmful to Karnataka;

(*c*) whether the Government intend to reconsider the question of readjustment of borders of Karnataka with Maharashtra State?

SRI D. DEVARAJ URS (Chief Minister).—

(*a*) Yes.

(*b*) Does not arise.

(*c*) Does not arise.

DISCUSSION ON MAHARASHTRA-KARNATAKA BORDER DISPUTE

442. SRI B. B. SAYANAK (Belgaum).—Will the Chief Minister be pleased to state :—

(*a*) whether it is a fact that the two Chief Ministers of Maharashtra and Karnataka had discussed the issue of finding a solution to border dispute between Maharashtra and Karnataka in the presence of the Home Minister of India;

(*b*) if so, the progress made in the matter;

(SRI B. B. SAYANAK)

(*c*) whether it is a fact that the Home Minister of India had suggested both the Cheif Ministers to maintain *status quo* in respect of the borders?

SRI D. DEVARAJ URS (Chief Minister).—

(*a*) The Chief Ministers of Karnataka and Maharashtra had discussions about the Maharashtra-Karnataka border dispute with the Union Home Minister separately on 29th December 1973. Later both of them together met the Union Home Minister and the Prime Minister:

(*b*) and (c) A copy of the Joint Statement issued after their discussions is appended.

JOINT STATEMENT

We have discussed with each other as well as with the Prime Minister and Union Home Minister the long standing question of border problem between Karnataka and Maharashtra. Our talks have been marked by the common objective of having informed and meaningful discussions in a cordial atmosphere with a view to enabling the speedy resolution of the issue. Towards this objective, we shall have further discussions among ourselves and with Central Leaders again during the coming weeks.

2. We appeal to the people to realise that it is their duty, as much as it is Government's duty, to ensure adequate and satisfactory protection to the Kannadigas in Maharashtra and the Marathis in Karnataka who will inevitably constitute linguistic minorities in the respective States. We are fully committed to the national policy of safeguarding the interests of linguistic minorities and reiterate our earnest and sincere intention to ensure the fullest implementation of this policy in our States.

3. The recent agitations have effectively brought home the lesson that such disturbances do nothing to promote the cause which they are supposed to serve, but on the other hand, they caused acute and avoidable distress to the people particularly those belonging to the weaker sections. It is, therefore, necessary to eschew the agitational approach with a view to ensuring a proper climatic for finding a satisfactory solution to the problem. The responsibility for this can be adequately discharged only if it is shared with Government by the leaders of the public and the people themselves. We have every hope that our peoples will display proper understanding and co-operation.

ಶ್ರೀ ಬಿ. ಜಿ ಬಣಕಾರ್ :—ಬೆಳಗಾಮಿ ನಗರಕ್ಕೆ ಹೊಂದಿದಹಾಗೆ ಬೆಳಗಾಮಿ ನಗರದ ಅವಯವಗಳಂತಿರುವ-ಕಾಗ್ಯಾಳಿ (ಬಿ. ಕೆ.) ಕಂಗ್ಯಾಳಿ (ಕೆ. ಎಚ್.) ಹಿಂಡಲಗಿ, ಸಂಪಗಾಂ, ಮಂಡೋಲಿ, ಹಂಗರಗಿ, ತಂತಲಪಾಡಿ, ಮಚ್ಛೆ, ಯಲ್ಲೂರ, ನಾಗೇನಹಳ್ಳಿ ಮತ್ತು ನಂದೀಹಳ್ಳಿ ಬೆಳಗಾಮಿಗೆ ನೀರು ಪೂರೈಸತಕ್ಕ ರಕ್ಷಸಕೊಪ್ಪ ಮೊದಲಾದ ಗ್ಯಾಮಗಳು ಮತ್ತು ಹೆದ್ದಾರಿ, ಲೋಂಡಾಜಂಕ್ಷನ್ನಿಂದ ಬೆಳಗಾಂ ವರೆಗೆ ದೇವರಾಯಿ ರೈಲ್ವೆಸ್ಟೇಷನ್ ಒಳಗೊಂಡು ಸುಮಾರು 71 ಕಿ. ಮೀ. ರೈಲ್ವೆ ಲೈನು ಹಾಗೂ ಮಲಪ್ರಭಾ ನದಿಯ ಮೂಲ ಇಷ್ಟೆಲ್ಲಾ ಪ್ರದೇಶಗಳಲ್ಲಿರತಕ್ಕ ಜಲ ತರುನಿಧಿ ಭಾರಿಸಂಪತ್ತೆಲ್ಲ ಈ ಮಹಾಜನ್ ವರದಿಯನ್ನು ಒಪ್ಪಿದರೆ ಮಹರಾಷ್ಟ್ರಕ್ಕೆ ಹೋಗುತ್ತದೆಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

‡SRI D. DEVARAJ URS:—If he goes through the Mahajan Commission Report, he can know are the village and areas that go to Karnataka and what are the areas: villages and towns that go to Maharashtra. They are mentioned in the Mahajan Commission Report. What the Hon. member says is with respect to the villages and round about places with regard to the City of Belgaum They have also been mentioned. What he has read is factual.

ಶ್ರೀ ಬಿ. ಜಿ. ಬಣಕಾರ್ : ಹಿಂದೆ ಆಗಲೇ ಪಾರ್ಲಿಯಮೆಂಟಿನಲ್ಲಿ ಮಹರಾಷ್ಟ್ರದ ಎಂ. ಪಿ. ಗಳು ಬೆಳಗಾಂ, ಚಿಕ್ಕೋಡಿ, ಹುಕ್ಕೇರಿ ಮತ್ತು ಖಾನಾಪುರ ತಾಲ್ಲೂಕುಗಳನ್ನು ಮಹರಾಷ್ಟ್ರದಲ್ಲಿ ಸೇರಿಸಬೇಕೆಂದು ತಂದಿದ್ದ ತಿದ್ದುಪಡಿಗಳೆಲ್ಲಾ

(ಶ್ರೀ ಬಿ. ಜಿ. ಬಣಕಾರ್)

ಅಲ್ಲಿ ಬಿದ್ದುಹೋಗಿರುವಾಗ ಈಗ ಮತ್ತೆ ಅದೇ ವಿಷಯವನ್ನು ಎತ್ತುವುದಕ್ಕೆ ಏಕೆ ಅವಕಾಶ ಕೊಟ್ಟರು? ಅವಕಾಶವನ್ನು ಕೊಟ್ಟನಂತರ ಈ ಬಿದ್ದು ವರದಿಯನ್ನೂ ತರಿಸಿಕೊಂಡ ನಂತರ ಅದಕ್ಕೆ ಮಹರಾಷ್ಟ್ರೀಯರು ಒಪ್ಪದಿದ್ದರೆ ಆ ಹಿಂದೇನು ಪಾರ್ಲಿಯಮೆಂಟ್ ತೀರ್ಮಾನ ಮಾಡಿತ್ತೋ ಅದನ್ನೇ ಏಕೆ ದೃಢಪಡಿಸಬಾರದು?

ಶ್ರೀ ಡಿ. ದೇವರಾಜ ಅರಸ್:—ಈ ಗಡಿ ಸಮಸ್ಯೆ ಯಾವುದಾದರೊಂದು ರೀತಿಯಲ್ಲಿ ಬಗೆ ಹರಿದರೆ ಅವರೂ ನಾವೂ ಒಂದು ನೆಮ್ಮದಿಯಿಂದ ಇರುವುದಕ್ಕಾಗುತ್ತದೆಯಲ್ಲ ಎಂದು ಹಿಂದೆ ಆ ಮಹಾಜನ್ ಕಮಿಷನ್ನಿನ್ನ ಸ್ಥಾಪನೆ ಆಯಿತು. ಆ ಮಹರಾಷ್ಟ್ರದವರೂ ಅದಕ್ಕೆ ಒಪ್ಪಿದ್ದರು. ಈ ಕಮಿಷನ್ನಿನ ತೀರ್ಮಾನವೇ ಅಖೈರೆಂದೂ ಆಗಲೇ ತೀರ್ಮಾನವಾಗಿತ್ತು. ಇದೇ ವಿಷಯ ಈ ಹಿಂದೆ ಇದೇ ಶಾಸನ ಸಭೆಯಲ್ಲಿ ಚರ್ಚೆಗೆ ಬಂದಿದ್ದಾಗ ಈ ಮಹಾ ಸಭೆ ಆ ಮಹಾಜನ್ ವರದಿಯನ್ನು ಜಾರಿಗೆ ತರುವುದಕ್ಕೆ ಒಪ್ಪಿಗೆಯನ್ನೂ ಕೂಡ ಕೊಟ್ಟಿದೆ. ಇಲ್ಲಿಗೆ ಈ ವರದಿ ಒಂದು 7 ವರ್ಷಗಳಾಗಿದ್ದರೂ ಮಹರಾಷ್ಟ್ರ ಸರ್ಕಾರದವರು ಇದು ಫರವರ್‌ಡೆಡ್ಡಾಗಿದೆ ಎಂದು ಹೇಳುತ್ತಿದ್ದಾರೆ. ಅವರು ಹಿಂದೆ ಒಪ್ಪಿದ್ದನ್ನು ಈ ದಿವಸ ಕೈಬಿಟ್ಟು ಹಿಂದೆ ಸರಿಯುತ್ತಿರುವುದನ್ನು ನೋಡಿ ಇಲ್ಲಿ ನಮ್ಮ ಸರ್ಕಾರದ ಪರವಾಗಿ ನಾವೂ ಕೂಡ ಆ ಮಹಾಜನ್ ವರದಿಯನ್ನು ಒಪ್ಪುವುದಿಲ್ಲ ಎಂದು ಹೇಳಬೇಕಾದ ಪ್ರಮೇಯ ಉಂಟಾಯಿತು. ಆದರೆ ಈ ವಿಚಾರಗಳೇನೇ ಇರಲಿ, ಯಾರೋ ಒಬ್ಬರು ತಾವು ಆಡಿದ ಮಾತಿನಂತೆ ನಡೆಯದಿದ್ದರೆ ನಾವೇಕೆ ಕೊಟ್ಟ ಮಾತಿಗೆ ತಪ್ಪಬೇಕು? ಹಾಗೆ ಕೊಟ್ಟ ಮಾತಿಗೆ ನಾವು ತಪ್ಪಬಾರದೆಂದು ನಾವು ಆ ವರದಿಯಂತೆ ಒಪ್ಪಿಕೊಳ್ಳುತ್ತೇವೆಂದು ಹೇಳಿದ್ದೇನೆ.

ಶ್ರೀ ಬಿ. ಜಿ. ಬಣಕಾರ್:—ಹಿಂದಿದ್ದ ಸರ್ಕಾರ ಸಾಧಕ ಬಾಧಕಗಳನ್ನು ನೋಡದೆ ಈ ಕಮಿಷನ್ ಮಾಡುವುದಕ್ಕೆ ಒಪ್ಪಿದ್ದರಿಂದ ಈಗಿರತಕ್ಕ ಸರ್ಕಾರ ಇದನ್ನೆಲ್ಲಾ ವಿಚಾರ ಮಾಡಿ ಏಕೆ ಒಂದು ಸರಿಯಾದ ನಿಲುವನ್ನು ತೆಗೆದುಕೊಳ್ಳಬಾರದು?

ಶ್ರೀ ಡಿ ದೇವರಾಜ ಅರಸ್: ಈ ವಿಚಾರದಲ್ಲಿ ಇಡೀ ಶಾಸನ ಸಭೆಯೂ ಒಪ್ಪಿರುವುದರಿಂದ ಈಗ ನಾವು ನಮ್ಮ ನಿಲುವನ್ನು ಬದಲಾಯಿಸುವುದು ಸರಿಯಲ್ಲ.

SRI B. B. SAYANAK:—In the Appendix to the Question it is stated: "We have discussed with each

other as well as with the Prime Minister and Union Home Minister the long-standing question of border problem between Karnataka and Maharashtra." May I know from the Hon'ble Chief Minister how many hours they discussed with each other and how many hours he discussed with the Prime Minister and Home Minister of India.

SRI D DEVARAJ URS :—It may range between two and three hours.

SRI B. B. SAYANAK : —May I know from the Chief Minister whether the Prime Minister has given any proposals to him ?

SRI D. DEVARAJ URS :—The Prime Minister does not give any proposals.

SRI B. B. SAYANAK :—I want to know whether the Home Minister of India has stated that we are not going to solve this Maharashtra Karnataka border dispute but we are going to maintain the status quo. Is it a fact ?

SRI D. DEVARAJ URS :—I do not know. If the hon. member knows, let him please tell us.

ಶ್ರೀ ಕೆ. ಎನ್. ವೀರಪ್ಪಗೌಡ : — ಈ ಮಹಾಜನ್ ಕಮಿಷನ್ನಿನ ನೇಮಕಕ್ಕೆ ಹಿಂದಿದ್ದ ಮುಖ್ಯ ಮಂತ್ರಿಗಳು ಒಪ್ಪಿಗೆಯನ್ನು ಕೊಟ್ಟಿದ್ದರು. ಅಲ್ಲದೆ ಹಿಂದೆ ಯಾರು ಈ ಮಹಾಜನ್ ಕಮಿಷನ್ನಿನ ನೇಮಕಕ್ಕಾಗಿ ಒತ್ತಾಯ ಮಾಡಿದ್ದರೋ ಅವರೇ ಈ ದಿವಸ ತಮ್ಮ ಮೂತಿಗೆ ಹಿಂದೆ ಬಿದ್ದು ಇದು ಬೇಡ ಎನ್ನುತ್ತಿರುವಾಗ, ನಾವೂ ಕೂಡ ಈ ವರದಿಯನ್ನು ಒಪ್ಪುವುದಿಲ್ಲ ಅಂದರೆ ಇದರಿಂದ ನಮಗಾಗತಕ್ಕ ತೊಂದರೆಯೇನು ? ಪ್ರಜಾಪ್ರಭುತ್ವದಲ್ಲಿ ಒಂದಾವರ್ತಿ ಮಾಡಿದ ತೀರ್ಮಾನವನ್ನು ಇನ್ನೊಂದು ಹೊಸ ಪಕ್ಷ ಅಧಿಕಾರಕ್ಕೆ ಬಂದಾಗ ಅದನ್ನು ಬದಲಾಯಿಸುವುದಕ್ಕೆ ಆ ಹೊಸ ಸದಸ್ಯರುಗಳಿಗೇನಾದರೂ ಆತಂಕವುಂಟೇ ?

9-30 A.M.

ಶ್ರೀ ಡಿ. ದೇವರಾಜ ಅರಸ್ : ಮೊದಲನೆ ಪ್ರಶ್ನೆಗೆ ಹಿಂದೆ ಒತ್ತಾಯದ ಮೇಲೆ ಒಪ್ಪಲಾಯಿತು ಎನ್ನುವುದು ನಿಜ. ಎರಡನೇ ಪ್ರಶ್ನೆ ನಾವು ಬದಲಾವಣೆ ಮಾಡುವುದಕ್ಕೆ ಅಡ್ಡಿ ಏನು ಏನ್ನುವುದರಲ್ಲಿ ನಾನು ಹೇಳುತ್ತಿರುವೆದು ಅಡ್ಡಿ ಪ್ರಶ್ನೆಯಲ್ಲ. ಈ ಸಭೆಗೆ ಬದಲಾವಣೆ ಮಾಡುವುದಕ್ಕೆ ಅಧಿಕಾರವಿದೆ. ಮಾನ್ಯ ಸದಸ್ಯರ ತಿಳುವಳಿಕೆಯಲ್ಲಿ ಹಿಂದೆ ತೆಗೆದುಕೊಂಡಂಥ ತೀರ್ಮಾನವನ್ನು ಬದಲಾವಣೆ ಮಾಡಬೇಕು ಎನ್ನುವುದಕ್ಕೆ ಕಾರಣಗಳಿದ್ದರೆ ಮಾನ್ಯ ಸಭೆ ಬದಲಾವಣೆ ಮಾಡುವುದಕ್ಕೆ ಏನೂ ಅಡ್ಡಿ ಇಲ್ಲ, ಯಾರದೂ ಅಡ್ಡಿ ಇಲ್ಲ. ಬದಲಾವಣೆ ಮಾಡಿದರೆ ನನ್ನದೂ ಅಡ್ಡಿ ಇಲ್ಲ. ಆದರೆ ಈ ಹೊತ್ತಿನ ಪರಿಸ್ಥಿತಿ ಹೇಗೆ ಬಂದಿದೆ ಎಂದರೆ ಮಹಾರಾಷ್ಟ್ರ ಸರ್ಕಾರದವರು ಒಂದೇ ಸಮನೆ ತಾವೇ ಒಪ್ಪಿ ಕಮಿಷನ್ ನೇಮಕ ವಾಗಬೇಕೆಂದು ಹೇಳಿ ಅದರ ತೀರ್ಮಾನ ಅಂತಿಮವಾದದ್ದು, ಉಭಯ ಪಕ್ಷಗಳ ಮೇಲೂ ಅದು ಬೈಂಡಿಂಗ್ ಆಗಿರುತ್ತದೆ ಎಂದು ಅವರೇ ಹೇಳಿದ ಮೇಲೆ ಈಗ ಮತ್ತೆ ಅದು ಸರಿಯಿಲ್ಲ, ಅದು ನಮಗೆ ಬೇಕಾಗಿಲ್ಲ, ಎಂದು ಹೇಳುತ್ತಿರುವಾಗ ನಾವು ಸುಮ್ಮನೆ ಇರೋಣ ಎಂದು ನಾನು ಹೇಳಿದ್ದೇನೆ ಅಷ್ಟೆ. ಆದುದರಿಂದ ವರದಿ ಬೇಡ ಎಂದು ನಾವಾಗಿ ಹೇಳುವ ಪರಿಸ್ಥಿತಿ ಬಂದಿಲ್ಲ. ಯಾವುದಾದರೂ ಒಂದು ವಿಚಾರದಲ್ಲಿ ನಾವು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದು ಅದರಲ್ಲಿ ಕಷ್ಟ ಸುಖಗಳು ಏನೇ ಇರಲಿ ಎರಡನ್ನೂ ಅನುಭವಿಸೋಣ ಎಂದು ನಾನು ಮೊದಲೇ ಹೇಳಿದ ಹಾಗೆ ಒಂದು ಸಮಸ್ಯೆ ಅಂತಿಮವಾಗಲಿ ಎಂದು ನಾವು ಒಪ್ಪಿದ್ದೇವೆ. ಈಗ ಅವರೇ ಬೇಡ ಬೇಡ ಎಂದು ಒಂದೇ ಸಮನೆ ಹೇಳುತ್ತಿದ್ದರೆ ಹಾಗೆಯೇ ಆಗಲಿಕ್ಕೆ ಬಿಟ್ಟರೆ ನಾವಾದರೂ ಕಳೆದುಕೊಳ್ಳುವುದು ಏನು ? ನನ್ನ ದೃಷ್ಟಿಯಲ್ಲಿ ನಾವು ಏನೂ ಕಳೆದುಕೊಳ್ಳುತ್ತಿಲ್ಲ. ಆ ದೃಷ್ಟಿಯಿಂದ ನಾವು ಸುಮ್ಮನೆ ಇದ್ದು ಬಿಡೋಣ ಎಂದು ನಾನು ಹೇಳಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ : ಮಹಾಜನ್ ವರದಿಯನ್ನು ಮಹಾರಾಷ್ಟ್ರ ಸರ್ಕಾರ ಒಪ್ಪದೆ ಇದ್ದ ಪಕ್ಷದಲ್ಲಿ ಯಥಾಸ್ಥಿತಿ ಇರುವುದಕ್ಕೆ ಸರ್ಕಾರ ಒಪ್ಪಿದೆಯೇ ಎನ್ನುವುದಕ್ಕೆ ಹಾಗೆದು ಎಂದು ಹೇಳಿದ್ದಾರೆ. ಈ ನಿರ್ಣಯ ಹಿಂದೆ ಈ ಸಭೆಯ ತೆಗದುಕೊಂಡ ನಿರ್ಣಯಕ್ಕೆ ತದ್ವಿರುದ್ಧವಲ್ಲವೇ ?

ಶ್ರೀ ಡಿ. ದೇವರಾಜ ಅರಸ್ : ಅದರಲ್ಲಿ ತದ್ವಿರುದ್ಧವೇನೂ ಇಲ್ಲವಲ್ಲ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ : ಕಾಸರಗೋಡಿನ ಬಗ್ಗೆ ಒಂದು ತೀರ್ಮಾನ ವಾಗುತ್ತದೆ ಎಂದು ಕಾಸರಗೋಡಿನ ಜನತೆ ಬಹಳ ಆಶಾಭಾವನೆಯಿಂದ ಇದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ಕೇರಳ ಮುಖ್ಯಮಂತ್ರಿಗಳೊಡನೆ ಮಾತುಕತೆ ನಡೆಸಲು ಏನಾದರೂ ತಾತ್ಕಾಲಿಕವಾಗಿ ತಾರೀಖನ್ನು ಗೊತ್ತು ಮಾಡಿದ್ದಾರೆಯೇ?

ಶ್ರೀ ಡಿ. ದೇವರಾಜ ಅರಸ್: ಕೇರಳ ಮುಖ್ಯ ಮಂತ್ರಿಗಳಿಗೆ ನಾನು ಬರೆದಿದ್ದೇನೆ. ಅವರಿಂದ ಉತ್ತರ ನಿರೀಕ್ಷಣೆ ಮಾಡುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್: ಜಂಟಿ ಹೇಳಿಕೆಯಲ್ಲಿ ತಿಳಿಸಿರುವಂತೆ 29-12-1973 ರ ನಂತರ ಮಹಾರಾಷ್ಟ್ರ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಕೇಂದ್ರ ನಾಯಕರ ಜೊತೆಯಲ್ಲಿ ಈ ಬಗ್ಗೆ ಚರ್ಚೆ ಮಾಡಿದ್ದಾರೆಯೇ? ಮಾಡದೆ ಹೋದರೆ ಮಾಡುವ ಸಂಭವವಿದೆಯೇ? ಬೇಗ ಚರ್ಚೆ ಮಾಡಿ ಈ ಪ್ರಶ್ನೆಯನ್ನು ಅದಷ್ಟು ಬೇಗ ಇತ್ಯರ್ಥ ಮಾಡುತ್ತಾರೆಯೇ?

ಶ್ರೀ ಡಿ. ದೇವರಾಜ ಅರಸ್:—ಎಲ್ಲರೂ ಸೇರಬೇಕು ಎಂದು ಹೇಳಿಕೆ ಕೊಟ್ಟಿದ್ದು ಸರಿ. ಆ ಮೇಲೆ ಗೊಂದಲಮಯವಾಯಿತಾದ್ದರಿಂದ ಸಮಸ್ಯೆ ಹಾಗೆಯೇ ಮುಂದುವರಿದುಕೊಂಡು ಬಂದಿದೆ. ಮಹಾರಾಷ್ಟ್ರ ಮುಖ್ಯ ಮಂತ್ರಿಗಳೊಡನೆ ಮತ್ತೆ ಮಾತನಾಡುವ ಸಂದರ್ಭ ಒದಗಲಿಲ್ಲ. ಕೇಂದ್ರದ ಮಾನ್ಯ ಗೃಹ ಸಚಿವರಲ್ಲಿ ಮಾತನಾಡಿದಾಗ ಈಗ ಸನ್ನಿವೇಶ ಸರಿಯಿಲ್ಲ ಎನ್ನುವುದನ್ನು ವ್ಯಕ್ತಪಡಿಸಿದರು. ಮತ್ತೆ ಸೇರಬೇಕು ಎಂದು ಅವರು ನನಗೆ ತಿಳಿಸಿಲ್ಲ.

ಶ್ರೀ ಕೆ. ಎಫ್. ಪಾಟೀಲ್:—ಮಹಾಜನ್ ಕಮಿಷನ್ ನೇಮಿಸುವ ಪೂರ್ವದಲ್ಲಿ ಕರ್ನಾಟಕದಲ್ಲಿ ಮಹಾಜನ್ ಕಮಿಷನ್ ನೇಮಿಸಬಾರದು ಎಂದು ಅಭೂತ ಪೂರ್ವ ಚಳುವಳಿ ನಡೆದದ್ದು ಸರ್ಕಾರದ ಲಕ್ಷ್ಯದಲ್ಲಿದೆಯೇ?

ಶ್ರೀ ಡಿ ದೇವರಾಜ ಅರಸ್:—ಇದೆ.

ಶ್ರೀ ಕೆ. ಎಫ್ ಪಾಟೀಲ್:—ಧಾರವಾಡದಲ್ಲಿ 25 ಸಾವಿರ ಜನ ಸತ್ಯಾಗ್ರಹ ಮಾಡಿದ್ದು, ಗದಗ್‌ನಲ್ಲಿ 20 ಸಾವಿರ ಜನ ಸತ್ಯಾಗ್ರಹ ಮಾಡಿದ್ದು ಮತ್ತು ವಿಧಾನ ಪರಿಷತ್ತಿನ ಸದಸ್ಯೆಯರಾಗಿದ್ದ ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರನ್ನು ದಸ್ತಗಿರಿ ಮಾಡಿದ್ದು ಮುಂತಾದ ವಿಷಯಗಳು ಸರ್ಕಾರದ ಲಕ್ಷ್ಯದಲ್ಲಿದೆಯೇ?

ಶ್ರೀ ಡಿ. ದೇವರಾಜ ಅರಸ್:— ನನಗೆ ಈ ಹೊತ್ತು ಜ್ಞಾಪಕವಿಲ್ಲದೇ ಹೋದರೂ ಮಾನ್ಯ ಸದಸ್ಯರಿಗೆ ಎಲ್ಲ ವಿಚಾರ ಗೊತ್ತಿದ್ದು ಹೇಳುತ್ತಿದ್ದಾರೆ. ಆ ರೀತಿ ಇರಬಹುದು.

SRI P. A. PAWSHE:—May I know whether you have discussed any proposals as to how to solve this problem?

SRI D. DEVARAJ URS:—We have discussed. Proposals ars more then one. There are so many proposals.

ಶ್ರೀ ಬಾಪೂಗೌಡ ರಾಯಪ್ಪ : ಮಾನ್ಯ ಮುಖ್ಯ ಮಂತ್ರಿಗಳು ಪುನಃ ಕೇಂದ್ರ ಮಂತ್ರಿಮಂಡಲದ ಕೂಡ ಅಥವಾ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳ ಕೂಡ ಕರ್ನಾಟಕ ಮಹಾರಾಷ್ಟ್ರ ಗಡಿ ಸಮಸ್ಯೆಯ ಬಗ್ಗೆ ಮಾತುಕತೆಗಳನ್ನು ಮುಂದುವರಿಸಿದಾಗ ಹಿಂದೆ ಈ ಮನೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಮಹಾಜನ್ ಕಮಿಷನ್ ನಿರ್ಣಯವನ್ನು ಕಾರ್ಯಗತ ಮಾಡಬೇಕೆಂದು ಒತ್ತಾಯ ಮಾಡುತ್ತಾರೆಯೇ ?

ಶ್ರೀ ಡಿ. ದೇವರಾಜ್ ಅರಸ್ : ಒತ್ತಾಯ ಮಾಡುವ ಪ್ರಶ್ನೆ ಇಲ್ಲ. ನಾವು ಅದನ್ನೇ ಹೇಳುತ್ತಿದ್ದೇವೆ. ನಾನು ಹೇಳಿರುವುದನ್ನು ಮಾನ್ಯ ಸಭೆ ಗಮನಿಸಿದೆ, ಅದನ್ನು ಮಾನ್ಯ ಸದಸ್ಯರೂ ಗಮನಿಸಬೇಕು. ಮಹಾಜನ್ ವರದಿಯನ್ನು ನಾವು ಬೇಡ ಎಂದು ಹೇಳಿಲ್ಲ, ಈಗಲೂ ನಾನೂ ಹೇಳಿಲ್ಲ. ಕಮಿಷನ್ ತೀರ್ಮಾನಕ್ಕೆ ಉಭಯ ಪಕ್ಷಗಳೂ ಬದ್ಧರಾಗಿರಬೇಕು ಎಂದೂ, ವರದಿಯಲ್ಲಿ ಏನೇ ಬರಲಿ ಅದನ್ನು ಒಪ್ಪೋಣವೆಂದೂ, ಹಿಂದೆ ತೀರ್ಮಾನವಾಗಿದೆ. ಈ ವರದಿಯಿಂದ ತಮಗೆ ಏನೋ ನಷ್ಟವಾಗುತ್ತದೆ, ಅವರ ದೃಷ್ಟಿಯಿಂದ ಅವರಿಗೆ ನ್ಯಾಯವಾಗಿ ಬರಬೇಕಾದ್ದು ಬರುತ್ತಿಲ್ಲ ಎನ್ನುವುದು ಮಹಾರಾಷ್ಟ್ರ ಸರ್ಕಾರದ ಭಾವನೆ. ನಮ್ಮ ದೃಷ್ಟಿಯಲ್ಲಿ ನ್ಯಾಯವಾಗಿ ನಮ್ಮಲ್ಲಿಯೇ ಇರಬೇಕಾದ್ದು ಸ್ವಲ್ಪ ಕಳೆದುಕೊಳ್ಳಬೇಕಾಗುತ್ತದೆ ಎನ್ನುವುದು ನಮ್ಮ ಭಾವನೆ. ನಮ್ಮ ದೃಷ್ಟಿಯಲ್ಲಿ ಕೆಲವು ನಮಗೆ ನಷ್ಟವಾಗುತ್ತದೆ ಎಂದು ಇದೆ, ಅವರ ದೃಷ್ಟಿಯಲ್ಲಿ ಬರುವುದು ಹೋಗುತ್ತದೆ ಎಂದು ಇದೆ. ಅದರೂ ನಾವು ಇದು ಒಂದು ಜಂಟಲ್‌ಮೆನ್ಸ್ ಆಗ್ರಿಮೆಂಟ್ ಎಂದು ಏನು ಹೇಳುತ್ತೇವೆ ಹಾಗೆ ಉಭಯತ್ರರೂ ಒಂದು ಸಾರಿ ಹೀಗೆ ಮಾಡೋಣ, ಹೀಗೆ ನಡೆಯೋಣ, ವರದಿ ಬಂದ ಕೂಡಲೇ ಯಾರಿಗೆ ಸ್ವಲ್ಪ ಹೆಚ್ಚಾಗಲಿ, ಕಡಮೆಯಾಗಲಿ ಇಬ್ಬರೂ ಒಪ್ಪೋಣ ಎನ್ನುವ ತೀರ್ಮಾನಕ್ಕೆ ಬಂದಿದ್ದೇವೆ. ತೀರ್ಮಾನವೆಂದರೆ ಪಾಂಡ್ ಬರೆದು ರಿಜಿಸ್ಟರ್ ಮಾಡಿದೆಯೇ ಎಂದು ಯಾರಾದರೂ ಕೇಳಬಹುದು. ನಾನಾಗಲೇ ಹೇಳಿದಂತೆ ಅದು ಜಂಟಲ್‌ಮೆನ್ಸ್ ಅಗ್ರಿಮೆಂಟ್. ಎರಡೂ ರಾಜ್ಯಗಳ ಮುಖ್ಯ ಮಂತ್ರಿಗಳು ಸೇರಿ ವರ್ಕಿಂಗ್ ಕಮಿಟಿಯಲ್ಲಿ ಬಂದು ತೀರ್ಮಾನ ತೆಗೆದುಕೊಂಡು ಇದು ಫೈನಲ್ ಅಂಡ್ ಬಾಂಡಿಂಗ್ ಎಂದು ಹೇಳಿಕೊಂಡು, ವರದಿ ಬಂದ ಮೇಲೆ ಅದನ್ನು ಒಪ್ಪುವುದಿಲ್ಲವೆಂದರೆ ಏನು ಮಾಡುವುದು ? ಕೋರ್ಟಿಗೆ ಹೋಗಿ ಅಲ್ಲಿ ನ್ಯಾಯಾಧೀಶರು ಒಂದು ತೀರ್ಮಾನವನ್ನು ಕೊಟ್ಟರೆ ಅದು ನನಗೆ ಸರಿಯಿಲ್ಲವೆಂದು ಕಂಡು ಬಂದರೆ ಸುಪ್ರೀಂ ಕೋರ್ಟಿಗೆ ಹೋಗುತ್ತೇನೆ. ಅಂತಿಮವಾಗಿ ಸುಪ್ರೀಂ ಕೋರ್ಟ್ ತೀರ್ಮಾನವನ್ನು ಕೊಟ್ಟಮೇಲೆ ಇನ್ನೇನೂ ಮಾಡುವುದಕ್ಕಾಗುವುದಿಲ್ಲ. ಮಹಾಜನ್ ಕಮಿಷನ್ ಕೊಟ್ಟಿರುವುದು ಬರೀ ವರದಿ, ಜಡ್ಜ್‌ಮೆಂಟಲ್ಲ ಎಂದು ಹೇಳಿದರೆ ಏನು ಮಾಡುವುದು ? ಕಮಿಷನ್ ಕೊಡುವುದು ಜಡ್ಜ್‌ಮೆಂಟಲ್ಲ, ವರದಿ ಎನ್ನುವುದಾದರೂ ಉಭಯತ್ರರೂ ಒಪ್ಪಿಕೊಂಡಿರುವುದರಿಂದ ಅದು ಒಂದು

ಜಡ್ಜ್‌ಮೆಂಟ್. ಸರ್ಕಾರದಿಂದ ಎಷ್ಟೋ ಕಮಿಷನ್ ನೇಮಕ ಮಾಡುತ್ತೇವೆ, ಅವರು ವರದಿಗಳನ್ನು ಒಪ್ಪಿಸುತ್ತಾರೆ. ಸರ್ಕಾರ ಅದರಲ್ಲಿ ಕೆಲವನ್ನು ಒಪ್ಪುತ್ತದೆ, ಕೆಲವನ್ನು ಬಿಡುತ್ತದೆ. ಆದರೆ ಇದು ಹಾಗಲ್ಲ. ಎರಡೂ ರಾಜ್ಯಗಳು ಒಪ್ಪಿಕೊಂಡುದರಿಂದ ಈ ವರದಿ ಬಂದಿದೆಯೇ ಹೊರತು ಯೂರೋ ಯೂನಿಲ್ಯಾಟರಲ್ ಆಗಿ ಮಾಡಿದ್ದಲ್ಲ. ಎರಡೂ ರಾಜ್ಯಗಳು ಒಪ್ಪಿದ್ದರಿಂದ ಕೇಂದ್ರ ಸರ್ಕಾರ ಕಮಿಷನ್ ನೇಮಕ ಮಾಡಿ ವರದಿಯನ್ನು ತರುವುದಕ್ಕೆ ಪ್ರಯತ್ನ ಪಟ್ಟಿತು. ವರದಿಯಲ್ಲಿ ಏನೇ ಬರಲಿ ಅದರ ಕಷ್ಟ ಸುಖಗಳೆರಡನ್ನೂ ಅನುಭವಿಸೋಣ, ಇದು ಅಂತಿಮವಾಗಿರಲಿ, ಮುಂದೆ ಬಾದ ವಿವಾದಗಳು ಬೇಡ ಎಂದು ಹೇಳಿದ್ದಾರೆ. ಹಾಗಿದ್ದೂ ಕೇವಲ ಬರವಣಿಗೆಯಲ್ಲಿಲ್ಲ, ರಿಜಿಸ್ಟರಾಗಿಲ್ಲ, ಎಂದು ಹೇಳುವುದು ಸರಿಯೇ? ಒಂದು ವೇಳೆ ಅವರು ಮಹಾಜನ್ ವರದಿ ಬೇಡ, ಅದರಿಂದ ದೂರ ಸರಿಯೋಣ ಎನ್ನುವ ಒಂದು ಹಠವನ್ನು ಸಾಧಿಸುವುದಾದರೆ ನಾವೂ ಯೋಚನೆ ಮಾಡಿದೆವು. ಅವರು ಬೇಡವೆಂದರೆ ನಾವು ಕಳೆದುಕೊಳ್ಳುವುದಾದರೂ ಏನು ಎಂದು. ಈ ಮಾನ್ಯ ಸಭೆ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಅದು 1970 ನೇ ಇಸವಿಯಲ್ಲಿ ಈಗ 1974ಕ್ಕೆ ಬಂದಿದ್ದೇವೆ ಈಗಲೂ ಕೂಡ ಅವರು ಅದೇ ವಾದವನ್ನು ಮಾಡುತ್ತ ಇರಬೇಕಾದರೆ ನಾವು ಕೂಲಂಕುಷವಾಗಿ ಪರಿಶೀಲನೆ ಮಾಡಿದಾಗ ಈ ವರದಿಯನ್ನು ಜಾರಿಗೆ ತರುವುದರಿಂದ ನಮಗೆ ಪ್ರಯೋಜನವಾಗುವುದಕ್ಕಿಂತ, ಸರ್ಕಾರದ ದೃಷ್ಟಿಯಲ್ಲಿ ನಮ್ಮಿಂದ ಹೋಗತಕ್ಕದ್ದೇ ಹೆಚ್ಚಾಗಿ ಹೆಚ್ಚು ನಷ್ಟವಾಗುತ್ತದೆ ಎನ್ನುವ ತೀರ್ಮಾನಕ್ಕೆ ಬಂದರೂ ಕೂಡ ನಾವು ಒಂದು ಸಲ ಒಪ್ಪಿದ ಮೇಲೆ ಅವರಾಗಿ ಬೇಡವೆಂದರೆ ನಾವು ಏಕೆ ಒತ್ತಾಯ ಮಾಡೋಣ, ಯಥಾಸ್ಥಿತಿ ಮುಂದುವರಿಯಲಿ ಅಂದುಕೊಂಡೆವು. ಅನೇಕ ರೀತಿಯ ಸಮಸ್ಯೆಗಳು ಇದರಲ್ಲಿವೆ. ಮುಖ್ಯವಾಗಿ ಈ ಸಮಸ್ಯೆಯನ್ನು ಬಗೆಹರಿಸಲೇ ಬೇಕಾಗಿದೆ. ಇದಕ್ಕೆ ಯಾವುದಾದರೂ ಒಂದು ಸಲ್ಯೂಷನ್ ಇರಬೇಕು ಎಂದು ನಾವು ಆ ರೀತಿ ಹೇಳಿದ್ದೇವೆ. ಅಷ್ಟೇ.

SRI S. A. PATIL.—Madam Speaker, it is known to all of us that the Mahajan Commission has been appointed at the instance of the Maharashtra Government and now during the course of discussion between the two Ministers, it is told by our leader that, if the Mahajan Commission report is not going to be agreed by the Maharashtra Government, the stand taken by the Karnataka Government was that the status quo should be maintained. So, as it stands if the status quo is to be maintained, there should be end to the border disputes once for all.

SRI D. DEVARAJ URS.—The status quo should be maintained or the Mahajan Commission's report should be implemented. These are the two things. If Mahajan Commission's report is not implemented, we say that the status quo be maintained. If again, tomorrow, if Maharashtra Government agrees for the implementation of the Mahajan Commission's report. that may be the solution. Barring these two, there is no other proposal.

ಶ್ರೀ ಬಿ. ಬಿ. ಬಣಕಾರ್ : ಮಹಾಜನ್ ಕಮಿಷನ್ ವರದಿ ಒಪ್ಪದಿದ್ದರೆ ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸುವುದು ಕಷ್ಟ ವಾಗುತ್ತದೆ ಎಂದು ಕೇರಳ ಸರಕಾರದ ಮುಖ್ಯ ಮಂತ್ರಿಗಳಿಂದ ಸಲಹೆ ಬಂದಿರಲಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್ : ಇದು ಕಷ್ಟ ಸುಖದ ಪ್ರಶ್ನೆಯೇ ಅಲ್ಲ. ಕೇರಳ ಸರಕಾರದ ಮುಖ್ಯ ಮಂತ್ರಿಗಳು ಹೇಳಿರುವ ಪ್ರಕಾರ ಈ ವಿಚಾರವನ್ನು ಪ್ರಸ್ತಾಪ ಮಾಡಿ ಅವರ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ.

I have no objection for discussing this issue with the Kerala Chief Minister. I have written to the Chief Minister of Kerala for a convenient date for meeting and discussion.

SRI B. B. SAYANAK.—Has it come to the notice of the Karnataka Government that Prime Minister of India has said on 20th of last month in the Rajya Sabha that she is going to solve this issue very quickly and similarly, the Home Minister of India has assured the Lok Sabha that he is going to solve this issue.

SRI D. DEVARAJ URS : When it has come to the notice of the Hon. Member, why should he bother about it. Whatever written in the press, it has come to our notice.

ಶ್ರೀ ಕೆ. ಎಫ್ ಪಾಟೀಲ್ :—ಬಾರ್ಡರಿನಲ್ಲಿರುವ ಮರಾಠಿಗರು ಹಾಗೂ ಕನ್ನಡಿಗರು ಚುನಾವಣೆಗಳನ್ನು ಹಾಗೂ ಗಲಭೆಗಳನ್ನು ಮಾಡುತ್ತಿದ್ದರೆ ಈ ಸಮಸ್ಯೆಯನ್ನು ಬಗೆಹರಿಸಲಾಗುವುದಿಲ್ಲ ಎಂದು ಪ್ರಧಾನ ಮಂತ್ರಿಗಳು ಹೇಳಿರುವುದು ಸರಕಾರಕ್ಕೆ ಗೊತ್ತಿದೆಯೇ ?

ಶ್ರೀ ಡಿ. ದೇವರಾಜ ಅರಸ್ .—ಗಲಭೆಗಳನ್ನು ಮಾಡಿದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ ಎಂದು ಅನೇಕ ಸಾರಿ ನಮ್ಮ ಪ್ರಧಾನ ಮಂತ್ರಿಗಳು ಹೇಳಿದ್ದಾರೆ.

SITES TO SITELESS AT DAVANAGERE

23. SMT. C. NAGAMMA KESHAWAMURTHY (Davanagere.)—Will the Minister for Law and Municipal Administration be pleased to state :—

(*a*) the number of sites distributed to the siteless at Davanagere ;

(*b*) whether the sites have been handed over to the persons allotted ;

(*c*) if not, the reason for the long delay in the matter ?

SRI D. K. NAIKAR (Minister for Law and Municipal Administration).—

(*a*) 2,287.

(*b*) No.

(*c*) The Government has taken very seriously about the delay and the sites will be handed over to the allottees as per conditions of allotment.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ : ಯಾವಾಗ ಇಲ್ಲಿ ಸೈಟುಗಳಿಗಾಗಿ ಅರ್ಜಿಗಳನ್ನು ಕರೆಯಲಾಗಿತ್ತು ? ಮತ್ತು ಇವರಿಂದ ಇಲ್ಲಿಯವರೆಗೆ ವಸೂಲಾಗಿರುವ ಹಣ ಎಷ್ಟು ?

†ಶ್ರೀ ಡಿ. ಕೆ ನಾಯಕರ್: ಸೈಟುಗಳಿಗಾಗಿ ಅರ್ಜಿಗಳನ್ನೇನೋ ಕರಿದಿದ್ದಾರೆ. ಆದರೆ ಅವರ ಕಡೆಯಿಂದ ಇನ್ನೂ ಯಾವ ಪ್ರೊಪೋಸಲ್ಲುಗಳೂ ಬಂದಿಲ್ಲ ಮತ್ತು ಎಷ್ಟು ಹಣ ವಸೂಲಾಗಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿಲ್ಲ.